<u>**ಕರ್ನಾಟಕ ವಿಧಾನ ಪರಿಷತ್ತು**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **274**

ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 06.12.2023

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದಿಂದ ಭೂ ಮಂಜೂರಾತಿಯಾಗಿರುವ ಪ್ರಕರಣಗಳು ಎಷ್ಟು; (ಗೋಮಾಳ ಸರ್ವೆ ನಂಬರುಗಳು) ರೈತರಿಗೆ ದುರಸ್ಥಿಯಾಗದೆ ಬಾಕಿಯಿರುವ ಪ್ರಕರಣಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94, 94ಬಿ ಹಾಗೂ 94ಎ(4)ರಡಿ ಕ್ರಮವಾಗಿ ನಮೂನೆ 50, 53 ಹಾಗೂ 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ, ಒಟ್ಟು 6,11,036 ಪ್ರಕರಣಗಳನ್ನು ಸಕ್ರಮಗೊಳಿಸಲಾಗಿದೆ.<br><br>ರಾಜ್ಯದಲ್ಲಿ ರೈತರಿಗೆ ಸರ್ಕಾರದಿಂದ ಮಂಜೂರಾತಿ ಆಗಿ ಪೋಡಿ ದುರಸ್ತಿ ಆಗದೇ ಭೂಮಾಪನ ಶಾಖೆಯಲ್ಲಿ ಅಳತೆಗಾಗಿ ಒಟ್ಟು 1210 ಪ್ರಕರಣಗಳು ಬಾಕಿಯಿರುತ್ತವೆ |
| ಆ) | ಸದರಿ ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇರಲು ಕಾರಣಗಳೇನು; | ಸದರಿ ಪ್ರಕರಣಗಳ ವಿಲೇವಾರಿ ವಿಳಂಬಕ್ಕೆ ಪ್ರಮುಖ ಕಾರಣಗಳು<br><br>1. ಆಕಾರಬಂದು ಮತ್ತು ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.<br>2. ಪಹಣಿ ಕಾಲಂ 3 ಮತ್ತು 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.<br>3. ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು(ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ- ಇತರೆ) ಲಭ ವಾಗದಿರುವುದು.<br>4. ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆಗಳ ನ್ವಯ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದು.<br>5. ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು.ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವ ಕಾಶ ಬೇಕಾಗುವುದು.<br>6. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವುದು.<br>7. ಭೂಮಾಪಕರು ಪ್ರತಿ ಮಾಹೆ ನಿಗದಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿ ಯಾಗುತ್ತಿರುವುದು ಮುಂತಾದ ಕಾರಣಗಳಿಂದ ದರಖಾಸ್ತು ಪೋಡಿ ಪ್ರಕರಣಗಳ ವಿಲೇ ವಾರಿ ವಿಳಂಬವಾಗುತ್ತಿರುತ್ತದೆ. |
| ಇ) | ಯಾವ ಕಾಲಮಿತಿಯಲ್ಲಿ ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು? | ಬಾಕಿಯಿರುವ ದರಖಾಸ್ತು ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು<br><br>1. ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳಲ್ಲಿ ನಿಯಮಾನು ಸಾರ ನಮೂನೆ 1 ರಿಂದ 5 ಭರ್ತಿ ಮಾಡಿ, ಧೃಡೀಕರಿಸಿ, ಕೇವಲ ಅರ್ಜಿದಾರರ ಮಂಜೂರಿಯ ನೈಜತೆಯನ್ನು ಪರಿಶೀಲಿಸಿ, ಏಕವ್ಯಕ್ತಿಗೆ ಪೋಡಿ ಮಾಡಲು ಅದೇಶಿಸುವ ಅಧಿಕಾರವನ್ನು ಸುತ್ತೋಲೆ ಸಂಖ್ಯೆ ಕಂಇ 8 ಎಲ್‌ಜಿಪಿ 2016 ದಿನಾಂಕ:20-06-2016 ಹಾಗೂ ತಿದ್ದುಪಡಿ ಕಂಇ 8.ಎಲ್‌ಜಿಪಿ 2016(ಭಾಗ-1) ದಿನಾಂಕ: 18-07-2016 ರನ್ವಯ ಸಂಬಂಧಿಸಿದ ತಹಶೀಲ್ದಾರ ರಿಗೆ ಪ್ರತ್ಯಾಯೋಜಿಸಿ |

| | | |
|---|---|---|
| | | ಆದೇಶಿಸಿದೆ.<br>2. ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರು ವಿಲೇ ಕಡತ ಪುನರ್ ನಿರ್ಮಾಣದ ಸಮಿತಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರದ ಸುತ್ತೋಲೆ ಸಂಖ್ಯೆ ಆರ್.ಡಿ.74. ಎಲ್.ಜಿ.ಪಿ.2009 ದಿಃ 17.9.2009 ಮತ್ತು ಕಂಇ 08 ಎಲ್.ಜಿ.ಪಿ 2016 ದಿ:20.6.2016 & ದಿ:18-7-2016 ರಡಿ ಸೂಚಿಸಲಾಗಿದೆ.<br>3. ಮಾನ್ಯ ನ್ಯಾಯಾಲಯದಿಂದ ಆದೇಶವಾಗಿದ್ದು ಮೂಲ ಮಂಜೂರಿ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಮಂಜೂರಿ ಜಮೀನಿನ ಪಹಣಿ/ಮ್ಯುಟೇಷನ್ ವಿಸ್ತೀರ್ಣ ಮತ್ತು ಅನುಭವ ಆದರಿಸಿ ನಿಯಾನುಸಾರ ಪೋಡಿ ಕ್ರಮ ಕೈಗೊಳ್ಳು ವಂತೆ ಸುತ್ತೋಲೆ ಸಂಖ್ಯೆಕಂಇ 08 ಎಲ್.ಜಿಪಿ 2016 ದಿ:20.06. 2016 ರಲ್ಲಿ ಸೂಚನೆ ನೀಡಲಾಗಿದೆ.<br>4. ಕಂದಾಯ ಇಲಾಖೆಯಿಂದ ಸರ್ಕಾರಿ ಜಮೀನುಗಳ ಪಹಣಿ ಒಟ್ಟುಗೂಡಿಸಿ ತಿದ್ದುಪಡಿ ಮಾಡುವ ಬಗ್ಗೆ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ<br>5. ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಕ್ರಮ ವಹಿಸಲಾಗುತ್ತಿದೆ.<br>6. ಪಹಣಿಯಲ್ಲಿನ ಮಾಲೀಕರ ಹೆಸರು/ಪೌತಿ ಖಾತೆ., ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂದ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>7. ನಮೂನೆ 1 ರಿಂದ 5 ಗಳನ್ನು ಡಿಜಿಟೈಜ಼್ ಮಾಡಿ ನೇರವಾಗಿ ಮೋಜಿಣಿ ತಂತ್ರಾಂಶ ಮುಖಾಂತರ ಅಳತೆ ಮಾಡಿ ನಮೂನೆ 6 ರಿಂದ 10 ಗಳನ್ನು ತಯಾರಿಸುವುದನ್ನು ಆಂದೋಲನ ರೂಪದಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>8. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>9. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 127 ಎಲ್‌ಜಿಕ್ಯೂ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು